ಬಳಕೆದಾರರಿಗೆ ಉರುವಲು ಕಟ್ಟಿಗೆ ಸಿಗದಿರುವ ಬಗ್ಗೆ.

೯೯. ಶ್ರೀ ಎಲ್.ಟಿ. ತಿಮ್ಮಪ್ಪ ಹೆಗ್ಡೆ (ಸಾಗರ).—ಮಾನ್ಯ ಅರಣ್ಯ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

(ಅ) ಅರಣ್ಯ ಇಲಾಖೆ ಹೊಸ ನೀತಿಯಿಂದಾಗಿ ಉರುವಲು ಕಟ್ಟಿಗೆಯನ್ನು ತಲೆಹೊರೆ, ಸೈಕಲ್ ಮತ್ತು ಗಾಡಿಗಳ ಮೂಲಕ ತರುತ್ತಿದ್ದ ಪದ್ಧತಿ ನಿಲ್ಲಿಸಿದ್ದರಿಂದ ಜನರಿಗೆ ಕಿರುಕುಳ ಉಂಟಾಗಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೆ?

(ಆ) ಎಲ್ಲಾ ಕಡೆಯೂ ಬಳಕೆದಾರರಿಗೆ ಸುಲಭಕ್ಕೆ ಉರುವಲು ಕಟ್ಟಿಗೆ ಸಿಗುವಂತೆ ಡಿಪೋಗಳನ್ನು ತೆರೆಯದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಮತ್ತು ಜಿಲ್ಲೆಯಿಂದ ಜಿಲ್ಲೆಗೆ ದರಗಳ ವ್ಯತ್ಯಾಸವಿರುವುದು ನಿಜವೆ? (ಜಿಲ್ಲಾವಾರು ವಿವರಗಳನ್ನು ಒದಗಿಸಬೇಕಾಗಿ ವಿನಂತಿ).

(ಇ) ಅತಿಯಾಗಿರುವ ಕಿರುಕುಳ ತಡೆಗಟ್ಟಿ ಜನತೆಗೆ ಉರುವಲು ಕಟ್ಟಿಗೆ ಸರಬರಾಜು ಸರಳವಾಗಿ ಆಗುವಂತೆ ಮಾಡಲು ಸರ್ಕಾರದವರು ಕೈಗೊಂಡ ಕ್ರಮ ಏನು? ಹಾಳಾಗುತ್ತಿರುವ ಒಣಸೌದೆಯನ್ನು ಗಾಡಿಯಲ್ಲಿ ತರಲು ಪರವಾನಗಿ ಕೊಡಲಾಗುವುದೆ?

ಶ್ರೀ ಜೀವಿಜಯ (ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಸ್ವಂತ ಉಪಯೋಗಕ್ಕಾಗಿ ತಲೆಹೊರೆಯಿಂದ ಉಚಿತವಾಗಿ ಒಣಗಿದ ಕಟ್ಟಿಗೆಯನ್ನು ಅರಣ್ಯದ ಹತ್ತಿರದಲ್ಲಿ ವಾಸ ಮಾಡುತ್ತಿರುವವರು ತರಲು ಯಾವ ಅಭ್ಯಂತರವೂ ಇರುವುದಿಲ್ಲ. ಸೈಕಲ್ ಮತ್ತು ಗಾಡಿಗಳ ಮೂಲಕ ಕಟ್ಟಿಗೆಯನ್ನು ತರುತ್ತಿದ್ದ ಪದ್ಧತಿಯಿಂದಾಗಿ ಅರಣ್ಯ ನಾಶವಾಗುತ್ತಿದ್ದುದರಿಂದ ಈ ಪದ್ಧತಿಯನ್ನು ನಿಲ್ಲಿಸಲಾಗಿದೆ. ಇದರಿಂದಾಗಿ ಸ್ವಂತ ಉಪಯೋಗದಾರರಿಗೆ ಯಾವ ಕಿರುಕುಳ ಉಂಟಾಗಿರುವುದು ಸರಕಾರದ ಗಮನಕ್ಕೆ ಬಂದಿರುವುದಿಲ್ಲ.

(ಆ) ಸರಕಾರವು ಸಾಧ್ಯವಾದಷ್ಟು ಕಟ್ಟಿಗೆ ಡಿಪೋಗಳನ್ನು ಮುಖ್ಯವಾಗಿ ಮಲೆನಾಡು ಪ್ರದೇಶದಲ್ಲಿ ತೆರೆದಿರುತ್ತದೆ. ಜಿಲ್ಲೆಯಿಂದ ಜಿಲ್ಲೆಗೆ ದರಗಳಲ್ಲಿ ವ್ಯತ್ಯಾಸವಿರುವುದು ನಿಜ. ಜಿಲ್ಲಾವಾರು ದರಗಳು ಈ ಕೆಳಗಿನಂತಿವೆ.—

ಸೌದೆಯ ಮಾರಾಟ ದರ

೧.	ಶಿವಮೊಗ್ಗ ಜಿಲ್ಲೆ	ರೂ.	೧೮೦-೦೦	ರಿಂದ	೨೭೬-೦೦	ಪ್ರತಿ ಟನ್ನಿಗೆ
೨.	ಚಿಕ್ಕಮಗಳೂರು	ರೂ.	—		೨೧೭-೦೦	,,
೩.	ಮೈಸೂರು	ರೂ.	೧೪೭-೦೦	ರಿಂದ	೨೮೮-೦೦	,,
೪.	ಕೊಡಗು	ರೂ.	—		೧೫೧-೦೦	,,
೫.	ದಕ್ಷಿಣ ಕನ್ನಡ	ರೂ.	೨೦೮-೦೦	ರಿಂದ	೨೯೫-೦೦	,,
೬.	ಧಾರವಾಡ	ರೂ.	೧೭೦-೦೦	ರಿಂದ	೩೧೫-೦೦	,,
೭.	ಚಿತ್ರದುರ್ಗ	ರೂ.	೩೭೦-೦೦	ರಿಂದ	೪೦೭-೦೦	,,
೮.	ಹಾಸನ	ರೂ.	—		೩೦೨-೦೦	,,
೯.	ಉತ್ತರ ಕನ್ನಡ	ರೂ.	—		೮೦-೦೦	,,
೧೦.	ಬೆಂಗಳೂರು	ರೂ.	೪೦೯-೦೦	ರಿಂದ	೪೨೫-೦೦	,,
೧೧.	ಬೆಳಗಾಂ	ರೂ.	—		೨೮೦-೦೦	,,

ಉಳಿದ ಜಿಲ್ಲೆಗಳಲ್ಲಿ ಡಿಪೋಗಳು ತೆರೆದಿರುವುದಿಲ್ಲ.

(ಇ) ಸರ್ಕಾರವು ಎಲ್ಲಿ ಸಾಧ್ಯವೋ ಅಲ್ಲೆಲ್ಲಾ ಉರುವಲು ಕಟ್ಟಿಗೆ ಡಿಪೋವನ್ನು ತೆರೆಯಲು ಉದ್ದೇಶಿಸಿದೆ. ಇದಲ್ಲದೇ ಗ್ರಾಮ ಪಂಚಾಯಿತಿಗಳು, ಸಹಕಾರಿ ಸಂಘಗಳು ಸೌದೆ ಸರಬರಾಜು ಮಾಡಲು ಮುಂದೆ ಬಂದಲ್ಲಿ ಅವರಿಗೆ ಎಲ್ಲಾ ಸಹಕಾರ ನೀಡಲಾಗುವುದು.

ಹಾಳಾಗುತ್ತಿರುವ ಒಣ ಸೌದೆಯನ್ನು ಡಿಪೋಗಳಿಗೆ ಸರಬರಾಜು ಮಾಡಲಾಗುವುದು. ಆದರೆ ಗಾಡಿಯ ಮೂಲಕ ತರಲು ಪರವಾನಗಿ ಕೊಡಲಾಗುವುದಿಲ್ಲ.

ಶ್ರೀ ಸಂಗಮೇಶ್ವರ್ ಸರ್ದಾರ್.—ಮಾನ್ಯ ಮಂತ್ರಿಗಳು ಓದಿದಂಥ ಹೇಳಿಕೆಯಲ್ಲಿ ನಮ್ಮ ರಾಯಚೂರು ಜಿಲ್ಲೆಯಲ್ಲಿ ಸೌದೆಯು ಮಾರಾಟದ ದರವನ್ನು ಹೇಳಲಿಲ್ಲ. ರಾಯಚೂರು ಜಿಲ್ಲೆಯಲ್ಲಿ ಸೌದೆ ಯಾವ ದರದಲ್ಲಿ ಮಾರಾಟವಾಗುತ್ತಿದೆ ಮಾರಾಟ ಮಾಡುವುದಕ್ಕೆ ತಕ್ಕ ರೀತಿಯಲ್ಲಿ ಸೌದೆ ಅಲ್ಲಿಗೆ ಸರಬರಾಜು ಆಗುತ್ತಿದೆಯೋ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು?

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಸದಸ್ಯರು ರಾಯಚೂರು ಜಿಲ್ಲೆಗೆ ಕಟ್ಟಿಗೆ ಬೇಕು ಎಂದರೆ ನಾವು ನಮ್ಮ ಇಲಾಖೆಯ ಮೂಲಕ ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ರಾಯಚೂರು ಜಿಲ್ಲೆಯಲಿ, ಸಹಕಾರ ಸಂಘಗಳವರು ಮತ್ತು ಗ್ರಾಮ ಪಂಚಾಯಿತಿಯವರು ಮುಂದೆ ಬಂದರೆ ನಾವು ಅವರಿಗೆ ಕಟ್ಟಿಗೆಯನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಅಲ್ಲಿಗೆ ಸಾಗಾಣಿಕೆಯ ದರವೂ ತುಂಬಾ ಆಗುತ್ತದೆ ಎಂದು ನಾನು ತಿಳಿಯುತ್ತೇನೆ. ಅವರು ಹೆಚ್ಚಿನ ಬೆಲೆಯನ್ನು ತೆರುವುದಕ್ಕೆ ತಯಾರಿದ್ದರೆ ನಾವು ಅವರಿಗೆ ಕಟ್ಟಿಗೆಯನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ನಾರಾಯಣಗೌಡ.—ಮಲೆನಾಡು ಪ್ರದೇಶದಲ್ಲಿ ಕಟ್ಟಿಗೆಯ ಅಭಾವ ವಿಪರೀತವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರು ಗಾಡಿಗಳಲ್ಲಿ ಕಟ್ಟಿಗೆಯನ್ನು ತರಲಿಕ್ಕೆ ಅವಕಾಶ ಮಾಡಿಕೊಡುತ್ತೀರಾ? ಮಾನ್ಯ ಕೆ. ಎಚ್ ಪಾಟೀಲರು ಅರಣ್ಯ ಮಂತ್ರಿಗಳಾಗಿದ್ದ ಕಾಲದಲ್ಲಿ ಗಾಡಿಗಳಲ್ಲಿ ಕಟ್ಟಿಗೆ ತರತಕ್ಕ ಪರವಾನೆಯನ್ನು ಕೊಡುವುದನ್ನು ನಿಲ್ಲಿಸಿದ್ದರು. ಕಟ್ಟಿಗೆಯ ಅಭಾವವನ್ನು ಸರ್ಕಾರದವರು ಮನಗಂಡು ಮಲೆನಾಡು ಪ್ರದೇಶದ ಜನರಿಗೆ ಗಾಡಿಗಳಲ್ಲಿ ಕಟ್ಟಿಗೆಯನ್ನು ತರಲು ಪರವಾನೆಯನ್ನು ಕೊಡಲು ಕ್ರಮ ತೆಗೆದುಕೊಳ್ಳುತ್ತಾರೆಯೇ? ಇವತ್ತು ಕಟ್ಟಿಗೆಗಳನ್ನು ತುಂಡು ಮಾಡಿ ನಿಗದಿತ ದರ ಏನಿದೆ ಅದರ ಪ್ರಕಾರ ಅದನ್ನು ಬಡವರಿಗೆ ಕೊಡುತ್ತಾ ಇಲ್ಲ. ಕಂಟ್ರಾಕ್ಟುದಾರರು ಏನಿದ್ದಾರೆ ಅವರು ಈ ವಿಚಾರದಲ್ಲಿ ಮುಂದೆ ಬರುತ್ತಾ ಇಲ್ಲ ಅರಣ್ಯ ಪ್ರದೇಶದಲ್ಲಿ ಇವತ್ತಿನದಿವಸ ಕಟ್ಟಿಗೆಗಳೆಲ್ಲಾ ಬಿಸಿಲಿನ ಬೇಗೆಗೆ ಉರಿದು ಸುಟ್ಟು ಹೋಗುತ್ತಾ ಇವೆ. ಇಂತಹ ಸಂದರ್ಭದಲ್ಲಿ ಕಟ್ಟಿಗೆಗಳ ಪೂರ್ಣ ಪ್ರಯೋಜನ ಬಡವರಿಗೆ ದೊರಕುವಂತೆ ಮಾಡಲು ಮಲೆನಾಡು ಪ್ರದೇಶದಲ್ಲಿ ಹಿಂದೆ ಇದ್ದಂತಹ ಪರವಾನಗಿ ಪದ್ಧತಿಯನ್ನು ಪುನಃ ಜಾರಿಗೆ ತರಲು ಸರ್ಕಾರದವರಿಗೆ ತೊಂದರೆ ಏನಿದೆ ?

ಶ್ರೀ ಬಿ. ಎ. ಜೀವಿಜಯ.—ಗಾಡಿಗಳು ಮತ್ತು ಇತರ ವಾಹನಗಳ ಮೂಲಕ ಸೌದೆಯನ್ನು ಪರವಾನಗಿ ನಿರ್ಬಂಧಿತ ರೀತಿಯಲ್ಲಿ ಸಾಗಿಸತಕ್ಕಂಥ ಪದ್ಧತಿಯಿಂದಾಗಿ ನಮ್ಮ ರಾಜ್ಯದಲ್ಲಿ ಅರಣ್ಯ ಕ್ಷಯಿಸಿದೆ. ಆದರೂ ಕೂಡ ರಾಜ್ಯದಲ್ಲೆಲ್ಲಾ ಈ ಸೌದೆ ಸರಬರಾಜಿನ ಬಗ್ಗೆ ಅಧಿಕ ಒತ್ತಾಯ ವಿದೆ. ಈ ಕಾರಣಕ್ಕಾಗಿ ಸರ್ಕಾರದಿಂದ ಹಲವಾರು ಡಿಪೋಗಳ ಮೂಲಕ ಸೌದೆಯನ್ನು ವಿತರಣೆ ಮಾಡಲಾಗುತ್ತಿದೆ. ಮಾನ್ಯ ಸದಸ್ಯರು ಅರಣ್ಯ ಪ್ರದೇಶಗಳಲ್ಲಿ ಸೌದೆಗಳು ಬಿಸಿಲಿನ ಬೇಗೆಗೆ ಉರಿದು ಸುಟ್ಟು ಹೋಗುತ್ತಿವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಹಾಗೆ ಆಗತಕ್ಕದ್ದನ್ನು ತಡೆಗಟ್ಟುವ ಸಲುವಾಗಿ ಈ ಶಿವಮೊಗ್ಗ, ಭದ್ರಾವತಿ ಮತ್ತು ಸಾಗರ ಈ ಮೂರು ಭಾಗಗಳಲ್ಲಿ ಅರಣ್ಯ ಪ್ರದೇಶಗಳಲ್ಲಿ ಏನು ಒಣಗಿದ ಸೌದೆ ಇದೆ ಅದನ್ನು ನಾವು ಡಿಪೋಗಳಿಗೆ ತರುತ್ತಿದ್ದೇವೆ. ಶಿವಮೊಗ್ಗದಿಂದ ೧೫೦೦ ಟನ್‌ಗಳು, ಭದ್ರಾವತಿಯಿಂದ ೭೫೦ ಟನ್‌ಗಳು, ಸಾಗರದಿಂದ ೬೦೦ ಟನ್‌ಗಳು ಹೀಗೆ ೨೮೫೦ ಟನ್‌ಗಳಷ್ಟು ಮರಗಳನ್ನು ನಾವು ಡಿಪೋಗಳಿಗೆ ತರುತ್ತಿದ್ದೇವೆ. ಅರಣ್ಯ ಇಲಾಖೆಯವರೂ ಕೂಡ ಬೇಸಿಗೆಯಲ್ಲಿ ಕಟ್ಟಿಗೆಗಳು ಉರಿದು ಸುಟ್ಟು ಹೋಗುತ್ತವೆ ಎಂದು ಏನು ಹೇಳುತ್ತಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ಇನ್ನು ಮುಂದೆ ಈ ರೀತಿ ಬೇಸಿಗೆಯಲ್ಲಿ ಕಟ್ಟಿಗೆಗಳು ಸುಟ್ಟು ಹೋಗುವುದಕ್ಕೆ ಆಸ್ಪದ ಕೊಡದೆ ಅವುಗಳನ್ನೆಲ್ಲಾ ಡಿಪೋಗಳಿಗೆ ತಂದು ವಿತರಣೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಘಟ್ಟಪ್ಪ ನಾಯಕ್.—ಸ್ವಾಮಿ, ಮಲೆನಾಡು ಭಾಗಕ್ಕೆ ಈ ಉರುವಲನ್ನು ಸಪ್ಲೈ ಮಾಡಿದ್ದಾರೆ ಎಂದು ಹೇಳಿದ್ದಾರೆ. ಆದರೆ ಚಿತ್ರದುರ್ಗ ಮತ್ತು ದಾವಣಗೆರೆ ಭಾಗಕ್ಕೆ ಏನು ಮಾಡಿದ್ದಾರೆ ಎಂಬುದು ಗೊತ್ತಿಲ್ಲ, ಅಲ್ಲಿ ಯಾವ್ಯಾವ ಡಿಪೋಗಳಿಗೆ ತಿಂಗಳಿಗೆ ಎಷ್ಟೆಷ್ಟು ಸಪ್ಲೈ ಮಾಡುತ್ತಿದ್ದಾರೆಯೋ ಗೊತ್ತಿಲ್ಲ. ಇದಲ್ಲದೇ ನಮ್ಮ ತಾಲ್ಲೂಕಿನಲ್ಲಿ ಯಾವುದೇ ಡಿಪೋ ಇಲ್ಲ ನಮ್ಮ ತಾಲ್ಲೂಕಿನಲ್ಲಿ ಈ ಒಣಗಿದ ಸೌದೆ ಸಿಕ್ಕುತ್ತಾ ಇಲ್ಲ. ಅಲ್ಲದೇ ಸೌದೆಗಳ ಕಳ್ಳತನ ನಮ್ಮ ಕಡೆ ಜಾಸ್ತಿಯಾಗುತ್ತಾ ಇದೆ. ಇದಕ್ಕೆಲ್ಲಾ ಒಂದು ರೀತಿಯಲ್ಲಿ ಸರ್ಕಾರದವರೇ ಅವಕಾಶ ಕೊಡುತ್ತಿದ್ದಾರೆ ಕಳ್ಳತನ ಆಗತಕ್ಕಂಥಾದ್ದನ್ನು ತಡೆಗಟ್ಟಲು ಮತ್ತು ಹೆಚ್ಚಿನ ರೀತಿಯಲ್ಲಿ ಸೌದೆಗಳನ್ನು ಸರಬರಾಜು ಮಾಡಲು ಇಲಾಖೆಯವರು ಏನಾದರೂ ಗಮನ ಕೊಟ್ಟಿದ್ದಾರೆಯೇ ಎಂದು ನಾನು ಪ್ರಶ್ನೆ ಮಾಡುತ್ತಿದ್ದೇನೆ.

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ. ಈಗ ಕರ್ನಾಟಕ ರಾಜ್ಯದಲ್ಲಿ ಒಟ್ಟು ಡಿಪೋಗಳ ಸಂಖ್ಯೆ ೧೫೫ ಇದೆ. ಬೆಂಗಳೂರು ಜಿಲ್ಲೆಯಲ್ಲಿ ಕೋ-ಆಪರೇಟಿವ್ ಸೊಸೈಟಿ ಮುಖಾಂತರ ೨೪ ಡಿಪೋಗಳನ್ನು ತೆರೆದಿದ್ದಾರೆ. ಶಿವಮೊಗ್ಗದಲ್ಲಿ ಈ ಕೆ. ಎಸ್. ಎಫ್ ಸಿ. ಗೆ ಸೇರಿದ ೮ ಡಿಪೋ. ಅರಣ್ಯ ಇಲಾಖೆಗೆ ಸೇರಿದ ೨೩ ಡಿಪೋಗಳು ಮತ್ತು ಕೋ-ಆಪರೇಟೀವ್ ಸೊಸೈಟಿಗೆ ಸೇರಿದ ಒಂದು ಡಿಪೋ ಇದೆ. ಚಿಕ್ಕಮಗಳೂರಿನಲ್ಲಿ ಕೆ. ಎಸ್. ಎಫ್. ಸಿ. ಗೆ ಸೇರಿದ ೨ ಡಿಪೋಗಳು. ಅರಣ್ಯ ಇಲಾಖೆಗೆ ಸೇರಿದ ೩ ಡಿಪೋಗಳು ಇವೆ. ನಾರ್ತ್‌ಕೆನರಾದಲ್ಲಿ ೩ ಮತ್ತು ೪೦ ಡಿಪೋಗಳು, ಸೌತ್ ಕೆನರಾದಲ್ಲಿ ೫ ಮತ್ತು ೨ ಡಿಪೋಗಳು ಇವೆ, ಚಿತ್ರದುರ್ಗದಲ್ಲಿ ಕೆ. ಎಸ್. ಎಫ್. ಸಿ. ಗೆ ಸೇರಿದ ೨ ಡಿಪೋಗಳು. ಮತ್ತು ಕೋ-ಆಪರೇಟೀವ್ ಸೊಸೈಟಿಗೆ ಸೇರಿದ ಒಂದು ಡಿಪೋ ಇದೆ. ಬೆಳಗಾಂನಲ್ಲಿ ೪ ಡಿಪೋಗಳು, ಧಾರವಾಡದಲ್ಲಿ ೧೩ ಡಿಪೋಗಳು, ಮೈಸೂರಿನಲ್ಲಿ ೧೫ ಡಿಪೋಗಳು, ಕೊಡಗಿನಲ್ಲಿ ೩ ಡಿಪೋಗಳು ಮತ್ತು ಹಾಸನದಲ್ಲಿ ಒಂದು ಡಿಪೋ, ಗುಲ್ಬರ್ಗದಲ್ಲಿ ೨ ಮತ್ತು ೧ ಡಿಪೋ ಇದೆ. ಈಗಾಗಲೇ ನಾನು ಈ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಯಾರ್ಯಾರಿಗೆ ಕಟ್ಟಿಗೆಯ ಅಗತ್ಯ ಇದೆ ಅವರಿಗೆಲ್ಲಾ ಅದನ್ನು ಪೂರೈಕೆ ಮಾಡುವುದಕ್ಕಾಗಿ ನಮ್ಮ ಇಲಾಖೆಯಿಂದ ಡಿಪೋಗಳನ್ನು ನಾವು ಓಪನ್ ಮಾಡಿದ್ದೇವೆ. ನಾವು ಈಗಾಗಲೇ ಎಲ್ಲಾ ಕಡೆ ಡಿಪೋಗಳನ್ನು ಪ್ರಾರಂಭ ಮಾಡಿದ್ದೇವೆ ಎಂದು ಆಗಲೇ ಹೇಳಿದ್ದೇನೆ. ಎಲ್ಲಿ ಡಿಪೋಗಳು ಇಲ್ಲ ಎಂದು ಹೇಳುತ್ತಾರೆ ಅಲ್ಲಿ ಪಂಚಾಯತಿಗಳು ಮತ್ತು ಕೋ ಆಪರೇಟೀವ್ ಸೊಸೈಟಿಗಳು ಮುಂದೆ ಬಂದರೆ ನಾವು ಅಲ್ಲಿ ಕಟ್ಟಿಗೆ ಡಿಪೋಗಳನ್ನು ಓಪನ್ ಮಾಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೇ. ಆಗಲೇ ಮಾನ್ಯ ಮಂತ್ರಿಯವರು ಬೆಲೆಯ ಪಟ್ಟಿಯನ್ನು ಹೇಳುತ್ತಾ ಶಿವಮೊಗ್ಗ ಜಿಲ್ಲೆಯಲ್ಲಿ ಸೌದೆ ಮಾರಾಟದ ದರ ಟನ್‌ಗೆ ೧೦೦ ರೂಪಾಯಿಯಿಂದ ೧೭೫ ರೂಪಾಯಿಗಳವರೆಗೆ ಇದೆ ಎಂದು ಹೇಳಿದರು. ಶಿವಮೊಗ್ಗ ನಗರದಲ್ಲಿ ಟನ್‌ಗೆ ೨೦೦ ರೂಪಾಯಿಗಳನ್ನು ಕೊಟ್ಟು ಕಟ್ಟಿಗೆಗಳನ್ನು ತರುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಇಲಾಖೆಯುವರು ತಪ್ಪು ಮಾಹಿತಿಯನ್ನು ನೀಡಿದ್ದಾರೆ. ಈ ಸದನಕ್ಕೆ ಅವರು ಸರಿಯಾದ ಮಾಹಿತಿಯನ್ನು ಕೊಡಬೇಕು. ಅರಣ್ಯ ಇಲಾಖೆಯವರು ನೇರವಾಗಿ ಈ ಕಟ್ಟಿಗೆಯನ್ನು ಕೊಟ್ಟರೆ ಕಡಿಮೆ ಬೆಲೆಗೆ ಕೊಡಬಹುದು. ಆದರೆ ಕಟ್ಟಿಗೆಯನ್ನು ಕೆ.ಎಸ್.ಎಫ್ ಸಿ. ಮೂಲಕ ಕೊಡುವುದರಿಂದ ಬೆಲೆಯು ಜಾಸ್ತಿಯಾಗಿದೆ. ಆದ್ದರಿಂದ ಈ ಕಟ್ಟಿಗೆ ಬೆಲೆಯನ್ನು ಇಳಿಸುವುದಕ್ಕೆ ಸಾಧ್ಯವೇ ?

ಶ್ರೀ ಬಿ.ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗದಲ್ಲಿ ಟನ್‌ಗೆ ೧೦೦ ರೂಪಾಯಿಗಳಿಂದ ೨೭೭ ರೂಪಾಯಿಗಳವರೆಗೆ ಬೆಲೆ ಇದೆ ಎಂದು ನಾನು ಆಗಲೇ ಹೇಳಿದ್ದೇನೆ.

ಶ್ರೀ ಗೋವಿಂದಗೌಡ.—ಮಾನ್ಯ ಅಧ್ಯಕ್ಷರೇ, ಮಲೆನಾಡಿನಲ್ಲಿ ವಾಸಮಾಡತಕ್ಕಂಥ ಜನರಿಗೆ ಈ ಕಟ್ಟಿಗೆ ಅವಶ್ಯಕವಾಗಿ ಬೇಕಾಗಿರುತ್ತದೆ. ಅಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಈ ಕಟ್ಟಿಗೆಯ ದರ ಒಂದೊಂದು ರೀತಿಯಲ್ಲಿದೆ. ಅರಣ್ಯ ಇಲಾಖೆಯವರು ನಿಗದಿ ಮಾಡಿರತಕ್ಕಂಥ ಈ ರೇಟ್ ಕೊಪ್ಪದಲ್ಲಿ ಒಂದು ತರಹ ಇದೆ, ನರಸಿಂಹರಾಜಪುರದಲ್ಲಿ ಒಂದು ತರಹ ಇದೆ. ಈ ಬಗ್ಗೆ ಮಾನ್ಯ ಮಂತ್ರಿಯವರು ರೇಟ್ ಏನಿದೆ ಎಂಬುದನ್ನು ನಿಖರವಾಗಿ ತಿಳಿಸಬೇಕು. ಆಮೇಲೆ ಈ ಹಳ್ಳಿಗಳಲ್ಲಿ ವಾಸ ಮಾಡತಕ್ಕಂಥ ಜನರಿಗೆ ಅನ್ನ ಹೇಗೆ ಮುಖ್ಯವೋ ಹಾಗೆ ಕಟ್ಟಿಗೆಯು ಮುಖ್ಯವಾಗಿರುತ್ತದೆ. ಅವರಿಗೆ ಕಡಿಮೆ ದರದಲ್ಲಿ ಕಟ್ಟಿಗೆಗಳನ್ನು ಒದಗಿಸಿಕೊಡುವುದಕ್ಕೆ ಅವಕಾಶವಿದೆಯೋ ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಹಾಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಗ್ರಾಮಮಟ್ಟದಲ್ಲಿ ಸತ್ತವನನ್ನು ಸುಡುವುದಕ್ಕೆ ಸೌದೆ ಸಿಕ್ಕುವುದಿಲ್ಲ ಅಂತಹ ಪರಿಸ್ಥಿತಿ ಉಂಟಾಗಿದೆ. ಆದರೆ ಬಿರ್ಲಾ ಫ್ಯಾಕ್ಟರಿಯವರಿಗೆ ಕಟ್ಟಿಗೆ ಯಥೇಚ್ಛವಾಗಿ ದೊರಕುತ್ತಾ ಇದೆ ಅವರಿಗೆ ಕೊಡತಕ್ಕಂಥಾದ್ದನ್ನು ಬಂದ್ ಮಾಡುವುದರಿಂದ ಆ ಜನರಿಗೆ ಪ್ರಯೋಜನವಾಗಬಹುದು. ಬಿರ್ಲಾ ಫ್ಯಾಕ್ಟರಿಯವರಿಗೆ ಬೇಕಾದಷ್ಟು ಕೊಡತಕ್ಕಂಥ ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಅದನ್ನು ಬಂದ್ ಮಾಡುವುದಕ್ಕೆ ಕಾನೂನು ಮಾಡಬೇಕಾದ ಪ್ರಸಂಗ ಬರಬಹುದು. ಗ್ರಾಮಮಟ್ಟದಲ್ಲಿ ಬಡ ಜನರಿಗೆ ಸೌದೆಯನ್ನು ಒದಗಿಸುವುದಕ್ಕಾಗಿ ಬಿರ್ಲಾ ಫ್ಯಾಕ್ಟರಿಯವರಿಗೆ ಕಟ್ಟಿಗೆ ಕೊಡತಕ್ಕಂಥಾದ್ದನ್ನು ಬಂದ್ ಮಾಡುವುದು ಸರಿಯೋ ಅಲ್ಲವೇ ?

ಶ್ರೀ ಬಿ.ಎ. ಜೀವಿಜಯ.—ಮಾನ್ಯ ಸಭಾಧ್ಯಕ್ಷರೇ, ಈ ಸೌದೆ ಮಾರಾಟದ ದರ ಏನಿದೆ ಇದು ಸೀನಿಯೋರೇಜ್ ದರ ಮತ್ತು ಸಾಕಾಣಿಕೆ ದರದ ಮೇಲೆ ಅವಲಂಬಿಸಿದೆ. ಮಲೆನಾಡಿನಲ್ಲಿ ಈ ಸೀನಿಯೋರೇಜ್ ದರ ೨೦ ರೂಪಾಯಿಗಳಷ್ಟಿದೆ. ಮಲೆನಾಡಿನ ಪಟ್ಟಣದ ಪ್ರದೇಶದಲ್ಲಿ ಈ ಸೀನಿಯೋರೇಜ್ ದರ ೫೬ ರೂಪಾಯಿಗಳಿದೆ. ಮತ್ತು ರಾಜ್ಯದ ಇತರ ಪ್ರದೇಶಗಳಲ್ಲಿ ಈ ಸೀನಿಯೋರೇಜ್ ದರ ೯೮ ರೂಪಾಯಿಗಳಿದೆ. ಈ ಸೀನಿಯೋರೇಜ್ ದರದ ಜೊತೆಗೆ ಸಾಕಾಣಿಕೆಯ ಖರ್ಚು ಸೇರಿ ಈ ಒಂದು ವ್ಯತ್ಯಾಸ ರಾಜ್ಯದ ಅನೇಕ ಕಡೆಗಳಲ್ಲಿದೆ. ಇನ್ನು ಎರಡನೆಯದಾಗಿ, ಮಾನ್ಯ ಸದಸ್ಯರು ಬಿರ್ಲಾ ಫ್ಯಾಕ್ಟರಿಯ ಬಗ್ಗೆ ಹೇಳಿದರು. ಈ ಬಿರ್ಲಾ ಫ್ಯಾಕ್ಟರಿ ಮತ್ತು ಹರಿಹರ ಪಾಲಿಫೈಬರ್ಸ್ ಇವುಗಳಿಗೆ ಕಟ್ಟಿಗೆಯನ್ನು ಪೂರೈಕೆ ಮಾಡತಕ್ಕಂಥಾದರಲ್ಲಿ ದೊಡ್ಡ ಸಮಸ್ಯೆಯೇ ಇದೆ. ನಮ್ಮ ಕರ್ನಾಟಕ ರಾಜ್ಯಕ್ಕೆ ಒಟ್ಟು ೨೦ ಲಕ್ಷ ಟನ್ ಕಟ್ಟಿಗೆ ಬೇಕಾಗುತ್ತದೆ. ಆದರೆ ಇದರ ಉತ್ಪಾದನೆ ಮಾತ್ರ ಕೇವಲ ೮ ಲಕ್ಷ ಟನ್ ಇದೆ. ಆದರೂ ಕೂಡ ಜನರ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಅನುಕೂಲವಾಗುವಂತೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಆ ಆಜ್ಞೆಯನ್ನು ಈ ಸಭೆಯ ಮುಂದೆ ಓದಿದರೆ ಒಳ್ಳೆಯದು ಎಂದು ಕಾಣುತ್ತದೆ. "With reference to the correspondence ending with your D.O. Letter, I am directed to state....

ಶ್ರೀ ಜಿ. ನಾರಾಯಣಕುಮಾರ್.—ಸ್ವಾಮಿ, ಮಾನ್ಯ ಮಂತ್ರಿಯವರು ಅದನ್ನು ಕನ್ನಡದಲ್ಲಿಯೇ ಹೇಳಲಿ.

ಉಪಾಧ್ಯಕ್ಷರು.—ಮಾನ್ಯ ನಾರಾಯಣಕುಮಾರ್ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ; ಮಾನ್ಯ ಮಂತ್ರಿಯವರು ಉತ್ತರ ಕೊಡುತ್ತಿದ್ದಾರೆ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಮಂತ್ರಿಗಳು ಕನ್ನಡದಲ್ಲಿ ಹೇಳಬೇಕು,

ಶ್ರೀ ಎಸ್.ಆರ್. ಬೊಮ್ಮಾಯಿ.—ಸರ್ಕಾರಿ ಆಜ್ಞೆ ಇಂಗ್ಲೀಷಿನಲ್ಲಿದೆ.

ಶ್ರೀ ಜಿ. ನಾರಾಯಣಕುಮಾರ್.—ಅದನ್ನೂ ಕೂಡ ಕನ್ನಡದಲ್ಲಿ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷರು.—ಹೀಗೆ ಮಾಡಿದರೆ ಬೇರೆ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ. ಬೇರೆ ಸ್ನೇಹಿತರು ನಿಮ್ಮನ್ನು ದೂರುತ್ತಾರೆ.

ಶ್ರೀ ಬಿ.ಎ. ಜೀವಿಜಯ.—ಕರ್ನಾಟಕ ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್ ಈ ಯೂಕಲಿಪ್ಟಸ್‌ನ್ನು ಮಾತ್ರ ಈ ಕಂಪನಿಗೆ ಕೊಡುತ್ತಾ ಇದ್ದಾರೆ. ಯೂಕಲಿಪ್ಟಸ್ ಏನಿದೆ ಅದನ್ನು ಮಿನಿಮಂ ನೀಡ್ಸ್ ಪ್ರೋಗ್ರಾಂ ಎನ್.ಆರ್.ಇ.ಪಿ. ಡಿ.ಪಿ.ಎ.ಪಿ. ಯಲ್ಲಿ ಬೆಳೆಸುತ್ತಿದ್ದೇವೆ. ಹಿಂದೆ ಸೌದೆಯನ್ನು ಇಂಡಸ್ಟ್ರೀಸ್‌ಗೆ ಏನು ಕೊಡುತ್ತಿದ್ದರು ಅದನ್ನು ಈಗ ತಡೆಗಟ್ಟಿದ್ದೇವೆ. ಇದರಿಂದ ೨೫ ಸಾವಿರ ಟನ್ ಬಳಕೆದಾರರಿಗೆ ಕೊಡತಕ್ಕಂಥ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದ್ದೇವೆ. ಹೆಚ್ಚೂ ಕಡಿಮೆ ಒಂದು ಲಕ್ಷದ ೧೮ ಸಾವಿರದ ೫೦೦ ಟನ್ ಕಟ್ಟಿಗೆಯನ್ನು ಕೊಡುತ್ತಾ ಇದ್ದೇವೆ. ಜನರ ಹಿತವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಇದರ ಬಗ್ಗೆ ಮರು ಪರಿಶೀಲನೆ ಮಾಡತಕ್ಕ ಕಾಲ ಬಂದೊದಗಿದೆ ಎಂದು ನಾನು ಅಂದುಕೊಂಡಿದ್ದೇನೆ ೧೯೮೧-೮೨ರಲ್ಲಿ ಈ ಒಂದು ಕಮಿಟ್‌ಮೆಂಟ್ ಇದ್ದರೂ ಕೂಡ ೫೦ ಸಾವಿರ ಟನ್‌ಗಳನ್ನು ನಾವು ಕೊಟ್ಟಿದ್ದೇವೆ. ಮಾನ್ಯ ಸ್ನೇಹಿತರು ಜಿಲ್ಲಾ ಕಂಪೆನಿಯನ್ನು ಮುಚ್ಚಬೇಕು ಎಂದು ಹೇಳಿದರು ಆ ರೀತಿ ಮಾಡಿದರೆ ಮಾನವ ಸಮಸ್ಯೆ ಉದ್ಭವವಾಗುತ್ತದೆ. ಸರ್ಕಾರವು ೨೦೦೧ನೇ ಇಸವಿಯವರೆಗೆ ಅವರಿಗೆ ರಾ ಮೆಟೀರಿಯಲನ್ನು ಕೊಡತಕ್ಕ ಒಂದು ಒಪ್ಪಂದ ಮಾಡಿಕೊಂಡಿದೆ. ಅಲ್ಲಿ ಬೇಕಾದಷ್ಟು ಕಾರ್ಮಿಕರು ಕೆಲಸ ಮಾಡಿಕೊಂಡಿದ್ದಾರೆ. ಇದನ್ನು ಏನಾದರೂ ನಿಲ್ಲಿಸಿದರೆ ಕಾರ್ಮಿಕರ ಸಮಸ್ಯೆ ಉದ್ಭವವಾಗುತ್ತದೆ, ಇದರ ಜೊತೆಗೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತವೆ. ಆದುದರಿಂದ ಮಾನ್ಯ ಸದಸ್ಯರುಗಳು ಕೊಟ್ಟ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಕಟ್ಟಿಗೆ ಪೂರೈಕೆಯನ್ನು ಪೂರೈಸಲಿಕ್ಕೆ ಪ್ರಯಂತ್ನ ಪಡುತ್ತೇವೆ. ದಿವಸ ದಿವಸ ಜನಸಂಖ್ಯೆ ಹೆಚ್ಚಿಗೆ ಆಗುತ್ತಾ ಉಂಟು. ನಮ್ಮ ಒಟ್ಟು ಉತ್ಪಾದನೆ ಬರೀ ೮ ಲಕ್ಷ ಟನ್, ಒಟ್ಟು ಬೇಡಿಕೆ ೨೦ ಲಕ್ಷ ಟನ್. ನಮ್ಮ ಸ್ನೇಹಿತರು ಹೇಳಿದಂತೆ

ಕಾಡನ್ನು ಸಂರಕ್ಷಣೆ ಮಾಡತಕ್ಕ ಕಾಲ ಒದಗಿ ಬಂದಿದೆ ಎಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ, ಇದೇ ರೀತಿ ಕಾಡನ್ನು ಕಡಿದುಕೊಂಡು ಹೋದರೆ ಮುಂದೆ ಬಹಳ ಕಷ್ಟವಾಗುತ್ತದೆ. ಕೊಡಗಿನಲ್ಲಿ ಅದೂ ನನ್ನ ಕ್ಷೇತ್ರದಲ್ಲಿಯೇ ೭೮ ಇಂಚು ಮಳೆ ಆಗಲಿಲ್ಲ. ಆದರೂ ನಾವು ಕಾಡನ್ನು ಸಂರಕ್ಷಣೆ ಮಾಡಬೇಕಾಗುತ್ತದೆ. ಕಾಡನ್ನು ಕಡಿದುಕೊಂಡು ಹೋದರೆ ಮುಂದಿನ ಭವಿಷ್ಯಕ್ಕೆ ತೊಂದರೆ ಮಾಡಿದಂತಾಗುತ್ತದೆ. ಆದ್ದರಿಂದ ಕಾಡನ್ನು ಸಂರಕ್ಷಣೆ ಮಾಡಲಿಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ.

MR. DEPUTY SPEAKER.—If the Hon. Members consider this is an important subject matter they may please give notice. I will allow half-an-hour for discussion on the same.

ನೋಟೀಸ್ ಕೊಡಿ. ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಡಿಸ್ಕಸ್ ಮಾಡೋಣ not in this fashion.

ಶ್ರೀ ಘಟ್ಟಪ್ಪನಾಯ್ಕ.—ಚಿತ್ರದುರ್ಗ ಜಿಲ್ಲೆಯಲ್ಲಿ ಸಾಕಷ್ಟು ಸೌದೆ ಸಿಕ್ಕುವುದಿಲ್ಲ.

ಶ್ರೀ ಟಿ. ಹೆಚ್. ಹನುಮಂತರಾಯಪ್ಪ.—ರೈತರು ಸೌದೆಯನ್ನು ಮಾರಾಟ ಮಾಡಲು ರಹದಾರಿ ಬೇಕಾಗಿದೆಯೇ ಮೊನ್ನೆ ತುಮಕೂರು-ಸಿರಾ ರೋಡಿನಲ್ಲಿ ರೈಡ್ ಮಾಡಿದ್ದಾರೆ, ಇದು ತಮ್ಮ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಸಭಾಧ್ಯಕ್ಷರೆ, ಈ ಬಗ್ಗೆ ಅನೇಕ ನಿಬಂಧನೆಗಳಿವೆ. ಅವರ ಸ್ವಂತ ಜಾಗದಲ್ಲಿ ಮರವನ್ನು ಕಟ್ಟಿಗೆ ಮಾಡಿ ಅವರು ಉಪಯೋಗಿಸಿಕೊಳ್ಳಲಿಕ್ಕೆ ತೊಂದರೆಯಿಲ್ಲ. ಅನ್ ಬ್ರೀಡಿಂಗ್ ಲ್ಯಾಂಡ್ ಆಗಿದ್ದರೆ ಅದಕ್ಕೆ ಸೀನಿಯರೇಜ್ ಕಟ್ಟಿ ಅದನ್ನು ಉಪಯೋಗಿಸಿಕೊಳ್ಳಬಹುದು. ಪರವಾನೆ ಕೊಡುವ ಪದ್ಧತಿ ಉತ್ತರ ಕನ್ನಡ ಜಿಲ್ಲೆ ಒಂದು ಬಿಟ್ಟು ಉಳಿದ ಜಿಲ್ಲೆಗಳಲ್ಲಿ ತೆಗೆದುಹಾಕಿದೆ. ಚಿಕ್ಕಮಗಳೂರು ಮತ್ತು ಶಿವಮೊಗ್ಗದಲ್ಲಿ ಮೊದಲು ಇತ್ತು. ೧೯೮೧ರಲ್ಲಿ ಅದನ್ನೂ ತೆಗೆದುಹಾಕಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಗುಂಡ್ಲುಪೇಟೆಯಲ್ಲಿ ಆಗುತ್ತಿರುವ ವಿಚಾರ ಏನೆಂದರೆ, ಹೆಣ್ಣು ಮಕ್ಕಳು ತಲೆಹೊರೆ ಸೌದೆ ತರಲಿಕ್ಕೆ ಹೋದರೆ ಅದನ್ನು ಕಿತ್ತುಕೊಂಡು ಮಾಮೂಲು ಬರಲಿಲ್ಲ ಎಂದು ಅವರನ್ನು ಹೊಡೆದು ಸೌದೆ ಸುಡುತ್ತಿದ್ದಾರೆ. ಇದಕ್ಕೆ ಏನಾದರೂ ಬಂದೋಬಸ್ತು ಮಾಡುತ್ತೀರಾ ? ಮಾನ್ಯ ಮಂತ್ರಿಗಳು ಹೇಳಿದಂತೆ ಸೌದೆ ಬೇಡಿಕೆ ಅಪಾರ, ಬೆಳೆಯುವುದು ಕಡಿಮೆ ಮಧ್ಯದಲ್ಲಿ ಹೆಂಗಸರು ಏನನ್ನು ಇಟ್ಟುಕೊಂಡು ಅಡಿಗೆ ಮಾಡಿ ಗಂಡಸರಿಗೆ ಊಟಕ್ಕೆ ಬಡಿಸಬೇಕು ಎಂದು ಹೇಳುತ್ತೀರಿ ?

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಸಭಾಧ್ಯಕ್ಷರೆ, ತಲೆಹೊರೆ ಸೌದೆ ತರಲಿಕ್ಕೆ ಯಾವ ಅಡ್ಡಿ ಆತಂಕಗಳೂ ಇಲ್ಲ.

ಶ್ರೀಮತಿ ನಾಗರತ್ನಮ್ಮ.—ಇಲ್ಲ ಎಂದು ನೀವು ಹೇಳುತ್ತೀರಿ.

ಶ್ರೀ ಬಿ. ಎ. ಜೀವಿಜಯ.—ನೀವು ನಿರ್ದಿಷ್ಟ ಪ್ರಕರಣ ಕೊಡಿ, ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ನಮ್ಮ ಮಲೆನಾಡು ಭಾಗದಲ್ಲಿ ಅರಣ್ಯದ ಬಗ್ಗೆ ಕಳಕಳಿ ಇದೆ. ಮಾನ್ಯ ಸದಸ್ಯರು ಸೌದೆಯನ್ನು ತಲೆಹೊರೆ ಕಟ್ಟಿಕೊಂಡು ತರಬೇಕು ಎಂದು ಹೇಳುತ್ತಿದ್ದಾರೆ. ಹಳ್ಳಿಗಳಲ್ಲಿ ಸೌದೆಯನ್ನು ಗಾಡಿ ಮೇಲೆ ತರಬೇಕಾಗುತ್ತದೆ. ಅದನ್ನು ಬಂದ್ ಮಾಡುತ್ತೇವೆ ಎಂದರೆ ಪ್ರತಿಯೊಂದು ಕಡೆಯಲ್ಲಿಯೂ ಡಿಪೋಗಳನ್ನು ಮಾಡಿ ಸಪ್ಲೈ ಮಾಡಲಿ. ಉರುವಲು ಕಟ್ಟಿಗೆಗೆ ತೊಂದರೆಯಾಗಬಾರದು. ಸಿದ್ದಾಪುರದಲ್ಲಿ ಗಾಡಿ ಮೇಲೆ ತರಲಿಕ್ಕೆ ಅವಕಾಶವಿದೆ. ಆದರೆ ಸಿದ್ದಾಪುರದಿಂದ ೮ ಮೈಲಿ ಈಚೆಗೆ ಗಾಡಿ ಮೇಲೆ ತರಲಿಕ್ಕೆ ಅವಕಾಶವಿಲ್ಲ. ಅಲ್ಲದೆ ಕಟ್ಟಿಗೆ ದರದಲ್ಲೂ ತಾರತಮ್ಯವಿದೆ. ಆದ್ದರಿಂದ ಈ ತಾರತಮ್ಯದ ನೀತಿಯನ್ನು ಹೋಗಲಾಡಿಸಬೇಕು. ಇದು ನಮಗೆ ಇರತಕ್ಕ ಜ್ವಲಂತ ಪ್ರಶ್ನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಮಲೆನಾಡು ಭಾಗದ ಸದಸ್ಯರನ್ನು ಹಳ್ಳಿಗಾಡಿನ ಸದಸ್ಯರನ್ನು ತಮ್ಮ ಛೇಂಬರಿಗೆ ಕರೆದು ಇತ್ಯರ್ಥ ಮಾಡುತ್ತೇನೆಂದು ಹೇಳಲಿ. ನಾವು ಒಪ್ಪಿಕೊಳ್ಳುತ್ತೇವೆ. ಇಲ್ಲದೇ ಹೋದರೆ ಸ್ಪಷ್ಟವಾದ ಉತ್ತರ ಕೊಡಿ. ಅಲ್ಲಿಂದ ೧೦ ಮೈಲಿ ಈಚೆಗೆ ಇರುವ ಪ್ರದೇಶದಲ್ಲಿ ಈ ತಾರತಮ್ಯ ಬೇಡ.

ಶ್ರೀ ಬಿ.ಎ. ಜೀವಿಜಯ.—ಈ ಪ್ರಶ್ನೆಗೆ ಆಗಲೆ ಉತ್ತರ ಕೊಟ್ಟಿದ್ದೇನೆ, ಇದು ಜ್ವಲಂತ ಸಮಸ್ಯೆ ಹೌದು.

Scarcity of Firewood in Shimoga District.

100. SRI B. S. YEDIYURAPPA (Shikaripur).—will the Hon'ble Minister of State for Forest be pleased to state.—

a) whether it is a fact that there are problems in procuring firewood in Shimoga District ?

b) if so, what action has been taken by Government in this regard ?

c) what is the total revenue derived by the Government by issuing pre-paid firewood licences in Shimoga District during 1980-81 ?

d) what is the total income accrued to Government consequent on stopping firewood prepaid permits in the District and selling through depots during 1981-82?

e) what are the reasons to stop the sale of firewood on prepaid permits even though there is provision as per Forest Hand Book to issue firewood permits in Shikaripur, Sorab, Sagar, Hosanagar, and Thirthahalli Taluks ?

SRI B.A. JIVIJAYA.—Minister of State for Forest ?

a) Excepting Sagar Division, there is some difficulty in procuring firewood in Shimoga and Bhadravathi Divisions.

b) Firewood is being distributed to the general public through five Depots of Karnataka State Forest Industries Corporation Ltd., at fixed rates in Shimoga City and through 4 Departmental Depots in Shimoga Forest Division. Firewood is being supplied to general public through 5 Depots in Bhadravathi Forest Division and through 10 Depots in Sagar Forest Division.

c) Government got a revenue of Rs. 2,41,641/ by issuing firewood pre-paid permits during 1980-81.

d) Government derived Rs. 11,56,319 as income during 1981-82 by selling firewood through depots.

e) Firewood is being distributed to the general public through the depots in Thirthahalli, Sikaripur Sagar, Sorab and Hosanagar Taluks. in the past persons who collected the firewood on the basis of prepaid permits used to cut down the trees indiscriminately. For this reasons as well as to prevent smuggling, the system of issuing pre-paid permits has been stopped in the district with effect from December 1981.